# 22/24 – K

Question Booklet Sl. No.

**Question Booklet Alpha Code**

**A**

A

**Total Number of Questions : 100** **Time : 90 Minutes**

**Maximum Marks : 100**

## INSTRUCTIONS TO CANDIDATES

1. The Question Paper will be given in the form of a Question Booklet. There will be four versions of Question Booklets with Question Booklet Alpha Code viz. **A, B, C** & **D**.
2. The Question Booklet Alpha Code will be printed on the top left margin of the facing sheet of the Question Booklet.
3. The Question Booklet Alpha Code allotted to you will be noted in your seating position in the Examination Hall.
4. If you get a Question Booklet where the alpha code does not match to the allotted alpha code in the seating position, please draw the attention of the Invigilator IMMEDIATELY.
5. The Question Booklet Serial Number is printed on the top right margin of the facing sheet. If your Question Booklet is un-numbered, please get it replaced by new Question Booklet with same alpha code.
6. The Question Booklet will be sealed at the middle of the right margin. Candidate should not open the Question Booklet, until the indication is given to start answering.
7. Immediately after the commencement of the examination, the candidate should check that the Question Booklet supplied to him/her contains all the 100 questions in serial order. The Question Booklet does not have unprinted or torn or missing pages and if so he/she should bring it to the notice of the Invigilator and get it replaced by a complete booklet with same alpha code. This is most important.
8. A blank sheet of paper is attached to the Question Booklet. This may be used for rough work.
9. **Please read carefully all the instructions on the reverse of the Answer Sheet before marking your answers.**
10. Each question is provided with four choices **(A), (B), (C)** and **(D)** having one correct answer. Choose the correct answer and darken the bubble corresponding to the question number using Blue or Black Ball Point Pen in the OMR Answer Sheet.
11. **Each correct answer carries 1 mark and for each wrong answer 1/3 mark will be deducted. No negative mark for unattended questions.**
12. No candidate will be allowed to leave the examination hall till the end of the session and without handing over his/her Answer Sheet to the Invigilator. Candidates should ensure that the Invigilator has verified all the entries in the Register Number Coding Sheet and that the Invigilator has affixed his/her signature in the space provided.
13. Strict compliance of instructions is essential. Any malpractice or attempt to commit any kind of malpractice in the Examination will result in the disqualification of the candidate.

A

1. ಕೆಳಗೆ ಸೂಚಿಸಿದ ವ್ಯಕ್ತಿಯನ್ನು ಗುರುತಿಸಿ.

   - 1898 ರಲ್ಲಿ ಕೊಡುಂಗಲ್ಲೂರಿನಲ್ಲಿ ಜನಿಸಿದರು
   - ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿ ಭಾಗವಹಿಸಿದರು
   - ಅನಂತರ ಅವರು ಸುಭಾಷ್ ಚಂದ್ರ ಬೋಸ್ ಅವರ ಫಾರ್ವರ್ಡ್ ಬ್ಲಾಕ್‌ನಿಂದ ಪ್ರಭಾವಿತರಾದರು
   - "ಅಲ್ ಅಮೀನ್" ಎಂಬ ದಿನಪತ್ರಿಕೆಯ ಸಂಸ್ಥಾಪಕ ಮತ್ತು ಸಂಪಾದಕ

   A) ಅಲಿ ಮುಸಲಿಯಾರ್
   B) ಪಟ್ಟಮ್ ಎ. ತಾನುಪಿಳ್ಳೈ
   C) ಟಿ. ಕೆ. ಮಾಧವನ್
   D) ಮುಹಮ್ಮದ್ ಅಬ್ದುರಹಿಮಾನ್ ಸಾಹಿಬ್

2. ಯಾವ ಪ್ರದೇಶವನ್ನು ಡಾಲ್‌ಹೌಸಿಯವರು "ಒಂದು ದಿನ ನಮ್ಮ ಬಾಯಲ್ಲಿ ಇಳಿಯುವ ಚೆರ್ರಿ ಹಣ್ಣು" ಎಂದು ವರ್ಣಿಸಿದರು ?

   A) ದೆಹಲಿ
   B) ಅವಧ್
   C) ಬಂಗಾಳ
   D) ಮದ್ರಾಸ್

3. ಕೆಳಗಿನವುಗಳಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ 1929 ರ ಲಾಹೋರ್ ಅಧಿವೇಶನಕ್ಕೆ ಸಂಬಂಧಿಸದ ನಿರ್ಣಯ(ಗಳನ್ನು) ಕಂಡುಹುಡುಕಿ.

   i) ಜವಾಹರಲಾಲ್ ನೆಹರು ಕಾಂಗ್ರೆಸ್ ಅಧ್ಯಕ್ಷರಾದರು
   ii) ಪೂರ್ಣ ಸ್ವರಾಜ್ ಕಾಂಗ್ರೆಸ್‌ನ ಗುರಿ
   iii) ಅಸಹಕಾರ ಚಳುವಳಿಯ ಆರಂಭ
   iv) ಜನವರಿ 26, 1930 ಅನ್ನು ಸ್ವಾತಂತ್ರ್ಯ ದಿನವನ್ನಾಗಿ ಆಚರಿಸಬೇಕು

   A) iii) ಮಾತ್ರ
   B) iii) ಮತ್ತು iv)
   C) ii) ಮಾತ್ರ
   D) i) ಹೊರತುಪಡಿಸಿ ಎಲ್ಲವೂ

4. ಈ ಕೆಳಗಿನವುಗಳಲ್ಲಿ 1921 ಎಂಬುದು ಯಾವ ಘಟನೆಯ ಶತಮಾನೋತ್ಸವ ವರ್ಷವಾಗಿದೆ ?

   A) ವ್ಯಾಗನ್ ದುರಂತ
   B) ಜಾಲಿಯನ್ ವಾಲಾಬಾಗ್
   C) ದೇವಾಲಯ ಪ್ರವೇಶ ಘೋಷಣೆ
   D) ವೈಕಂ ಸತ್ಯಾಗ್ರಹ

5. ಕೆಳಗಿನ ಜೋಡಿಗಳನ್ನು ಪರಿಶೀಲಿಸಿ.

   i) ಕುಡಿ ಅರಸು – ಇ. ವಿ. ರಾಮಸ್ವಾಮಿ ನಾಯ್ಕರ್

   ii) ವಿವೇಕವರ್ಧಿನಿ – ವೀರೇಶಲಿಂಗಂ

   iii) ಗುಲಾಮಗಿರಿ – ಜ್ಯೋತಿರಾವ್ ಫುಲೆ

   iv) ಸಂಬದ್ ಕೌಮುದಿ – ಶ್ರೀ ನಾರಾಯಣ ಗುರು

   ಇವುಗಳಲ್ಲಿ ಸರಿಯಾದ ಜೋಡಿ(ಗಳನ್ನು) ಕಂಡುಹುಡುಕಿ.

   A) i) ಮತ್ತು iv)
   B) i), ii) ಮತ್ತು iii)
   C) ii), iii) ಮತ್ತು iv)
   D) iii) ಮತ್ತು iv)

6. ಕೆಳಗಿನವುಗಳನ್ನು ಕಾಲಾನುಕ್ರಮದ ಆಧಾರದ ಮೇಲೆ ಜೋಡಿಸಿ.

   i) ಫ್ರೆಂಚ್ ಕ್ರಾಂತಿ

   ii) ಇಂಗ್ಲೆಂಡ್‌ನಲ್ಲಿನ ಮಹಾಕ್ರಾಂತಿ

   iii) ರಷ್ಯಾದ ಕ್ರಾಂತಿ

   iv) ಅಮೇರಿಕನ್ ಸ್ವಾತಂತ್ರ್ಯ ಹೋರಾಟ

   A) i), iv), iii), ii)
   B) ii), i), iv), iii)
   C) ii), iv), i), iii)
   D) iv), ii), iii), i)

7. ಅತ್ಯಂತ ಪ್ರಸಿದ್ಧವಾದ 'ಮೂಗಾ ಸಿಲ್ಕ್ಸ್' ಎಂಬುದು ಯಾವ ರಾಜ್ಯಕ್ಕೆ ಸಂಬಂಧಿಸಿದೆ ?

   A) ರಾಜಸ್ಥಾನ
   B) ಅಸ್ಸಾಂ
   C) ಬಿಹಾರ
   D) ಮಹಾರಾಷ್ಟ್ರ

8. ಜಿಪಿಎಸ್ ಬಳಸಿ ಒಂದು ಸ್ಥಳವನ್ನು ನಿಖರವಾಗಿ ನಿರ್ಧರಿಸಲು ಕನಿಷ್ಠ ಎಷ್ಟು ಉಪಗ್ರಹಗಳ ಸಂಕೇತದ ಅಗತ್ಯವಿದೆ ?

   A) 1 ಉಪಗ್ರಹ
   B) 2 ಉಪಗ್ರಹಗಳು
   C) 3 ಉಪಗ್ರಹಗಳು
   D) 4 ಉಪಗ್ರಹಗಳು

9. ಒಡಿಶಾದ ಕೊರಾಪುಟ್ ಜಿಲ್ಲೆಯಲ್ಲಿ ಹುಟ್ಟುವ 'ಟೆಲ್ ನದಿ' ಯಾವ ನದಿಯ ಉಪನದಿಯಾಗಿದೆ ?

   A) ಮಹಾನದಿ
   B) ಲೂನಿ ನದಿ
   C) ಗೋದಾವರಿ
   D) ಕಾವೇರಿ

10. ಈ ಕೆಳಗಿನವುಗಳಲ್ಲಿ ಯಾವುದನ್ನು ಕೇವಲ 'ರಾಬಿ ಬೆಳೆ' ಎಂದು ಬೆಳೆಸಲಾಗುತ್ತದೆ ?

   A) ಮೆಕ್ಕೆಜೋಳ, ಕಡಲೆಕಾಯಿ
   B) ಗೋಧಿ, ಜೋವರ್
   C) ಭತ್ತ , ಹತ್ತಿ
   D) ಬಾರ್ಲಿ ಮತ್ತು ದ್ವಿದಳ ಧಾನ್ಯಗಳು

11. ಭಾರತದಲ್ಲಿ ಮೊದಲು ಮಾನ್ಸೂನ್ ಮಳೆ ಬೀಳುವ ಪ್ರದೇಶ ಯಾವುದು ?

A) ಹಿಮಾಲಯ
B) ಪಶ್ಚಿಮ ಘಟ್ಟಗಳು
C) ಮೇಘಾಲಯ ಪ್ರಸ್ಥಭೂಮಿ
D) ಪೂರ್ವ ಘಟ್ಟಗಳು

12. 'ತಿಪೈ ಮುಖ್ ' ಅಣೆಕಟ್ಟು ಯಾವ ದೇಶಗಳ ನಡುವಿನ ವಿವಾದಕ್ಕೆ ಕಾರಣವಾಗಿತ್ತು ?

A) ಭಾರತ – ಬಾಂಗ್ಲಾದೇಶ
B) ಭಾರತ – ನೇಪಾಳ
C) ಭಾರತ – ಚೀನಾ
D) ಭಾರತ – ಭೂತಾನ್

13. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಪ್ರಸಕ್ತ ಗವರ್ನರ್ ಯಾರು ?

A) ಶಕ್ತಿಕಾಂತ ದಾಸ್
B) ಉರ್ಜಿತ್ ಪಟೇಲ್
C) ರಘುರಾಮ್ ರಾಜನ್
D) ಡಿ. ಸುಬ್ಬರಾವ್

14. ನಬಾರ್ಡ್‌ಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಯು ಸರಿಯಾಗಿದೆ ?

i) ಬಿ. ಶಿವರಾಮನ್ ಸಮಿತಿಯ ಶಿಫಾರಸಿನ ಮೇರೆಗೆ ನಬಾರ್ಡ್ ಅನ್ನು ರಚಿಸಲಾಗಿದೆ

ii) ನಬಾರ್ಡ್ ಎಂಬುದು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ಭಾರತದ ರಾಷ್ಟ್ರೀಯ ಬ್ಯಾಂಕ್ ಆಗಿದೆ

iii) ನಬಾರ್ಡ್ ಪ್ರಧಾನ ಕಛೇರಿ ಮುಂಬೈನಲ್ಲಿದೆ

A) i) ಮತ್ತು ii)
B) i) ಮತ್ತು iii)
C) ii) ಮತ್ತು iii)
D) i), ii) ಮತ್ತು iii)

15. ಕೇರಳ ರಾಜ್ಯದಲ್ಲಿ ಕುಟುಂಬಶ್ರೀ ಆದಾಯ ಮತ್ತು ಉದ್ಯೋಗವನ್ನು ಖಾತರಿಪಡಿಸುವ ಮೂಲಕ 100 ದಿನಗಳಲ್ಲಿ 6429 ಕುಟುಂಬಗಳನ್ನು ಬಡತನದ ತೀವ್ರತೆಯಿಂದ ಮುಕ್ತಗೊಳಿಸಲು ಯಾವ ಯೋಜನೆಯನ್ನು ಜಾರಿಗೊಳಿಸಿದೆ ?

A) ಅತಿಜೀವನಂ ಯೋಜನೆ
B) ಉಪಜೀವನಂ ಯೋಜನೆ
C) ಜೀವನಂ ಯೋಜನೆ
D) ಉಜ್ಜೀವನಂ ಯೋಜನೆ

16. ಸುವರ್ಣ ಕ್ರಾಂತಿ ಯಾವುದಕ್ಕೆ ಸಂಬಂಧಿಸಿದೆ ?

A) ಮೊಟ್ಟೆ
B) ಮೀನು ಸಾಕಣೆ
C) ಪೆಟ್ರೋಲಿಯಂ
D) ತೋಟಗಾರಿಕೆ

17. ಪ್ರಪಂಚದಲ್ಲಿ ಅತಿ ಹೆಚ್ಚು ಹಾಲು ಉತ್ಪಾದಿಸುವ ದೇಶ ಯಾವುದು ?

A) ಪಾಕಿಸ್ತಾನ
B) ಚೀನಾ
C) ಭಾರತ
D) ಬ್ರೆಜಿಲ್

18. ಭಾರತೀಯ ಯೋಜನಾ ಶಿಲ್ಪಿ ಎಂದು ಯಾರನ್ನು ಕರೆಯುತ್ತಾರೆ ?

A) ಪಿ. ಸಿ. ಮಹಲನೋಬಿಸ್
B) ಎಂ. ವಿಶ್ವೇಶ್ವರಯ್ಯ
C) ಕೆ. ಎನ್. ರಾಜ್
D) ಸುಖಮೋಯ್ ಚಕ್ರವರ್ತಿ

19. ಹಣಕಾಸು ಮಸೂದೆಯ ಬಗೆಗಿನ ಭಾರತೀಯ ಸಂವಿಧಾನದ ಪರಿಚ್ಛೇದ

A) 109
B) 209
C) 74
D) 169

20. ಕೆಳಗಿನವುಗಳಲ್ಲಿ ಯಾವುದನ್ನು ಕಾಂಕರೆಂಟ್ ಪಟ್ಟಿಯಲ್ಲಿ ಸೇರಿಸಲಾಗಿದೆ ?

i) ಸಾರ್ವಜನಿಕ ಆರೋಗ್ಯ
ii) ಕಲಬೆರಕೆ
iii) ಉದ್ಯೋಗ
iv) ವ್ಯಾಪಾರ ಮತ್ತು ವಾಣಿಜ್ಯ

A) i) ಮತ್ತು ii)
B) ii) ಮತ್ತು iii)
C) iii)
D) iv)

21. ಈ ಕೆಳಗಿನವುಗಳಲ್ಲಿ ಯಾವುದು/ವು ಚುನಾವಣಾ ಆಯೋಗದ ಕರ್ತವ್ಯ ಆಗಿದೆ/ವೆ ?

i) ಮೀಸಲು ಕ್ಷೇತ್ರಗಳನ್ನು ಗೊತ್ತುಪಡಿಸುವುದು
ii) ಮತದಾರರ ಪಟ್ಟಿಯನ್ನು ತಯಾರಿಸುವುದು
iii) ಪಂಚಾಯತ್ ಚುನಾವಣೆಗಳ ಮೇಲ್ವಿಚಾರಣೆ

A) i) ಮತ್ತು ii)
B) ii)
C) i), ii) ಮತ್ತು iii)
D) iii)

22. ಸಂವಿಧಾನ ಸಭೆಯ ಮೊದಲ ಅಧಿವೇಶನ ನಡೆದುದು

A) 9 ಡಿಸೆಂಬರ್ 1949ರಂದು ದೆಹಲಿಯಲ್ಲಿ
B) 9 ಡಿಸೆಂಬರ್ 1949ರಂದು ಕಲ್ಕತ್ತಾದಲ್ಲಿ
C) 6 ಡಿಸೆಂಬರ್ 1949ರಂದು ಬಾಂಬೆಯಲ್ಲಿ
D) 6 ಡಿಸೆಂಬರ್ 1946ರಂದು ಅಮೃತಸರದಲ್ಲಿ

23. 1989ರಲ್ಲಿ _______ ಸ್ಥಳೀಯ ಸಂಸ್ಥೆಗಳ ಸಾಂವಿಧಾನಿಕ ಮಾನ್ಯತೆಯನ್ನು ಶಿಫಾರಸು ಮಾಡಿತು.

A) ಅಶೋಕ್ ಮೆಹ್ತಾ ಸಮಿತಿ
B) ಹನುಮಂತ ರಾವ್ ಸಮಿತಿ
C) ಪಿ.ಕೆ. ತುಂಗನ್ ಸಮಿತಿ
D) ನ್ಯಾಯಮೂರ್ತಿ ವೆಂಕಟಾಚಲಯ್ಯ ಸಮಿತಿ

24. ಈ ಕೆಳಗಿನವುಗಳಲ್ಲಿ ಉಚ್ಚ ನ್ಯಾಯಾಲಯವು ಹೊರಡಿಸಬಹುದಾದ ಆದೇಶ/ಗಳು

i) ಹೇಬಿಯಸ್ ಕಾರ್ಪಸ್

ii) ಕ್ವೋ ವಾರೆಂಟೊ

iii) ಸರ್ಟಿಯೊರರಿ

A) i) ಮತ್ತು iii)
B) ii) ಮತ್ತು i)
C) i), ii) ಮತ್ತು iii)
D) i)

25. ಈ ಕೆಳಗಿನವುಗಳು ಮಾರ್ಗದರ್ಶಿ ಸೂತ್ರಗಳಲ್ಲಿ ಸೇರಿವೆ

i) ದೇಶದ ರಕ್ಷಣೆ

ii) ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆ

iii) ಶೋಷಣೆ ವಿರುದ್ಧ ಹಕ್ಕು

iv) ಪರಿಸರ ರಕ್ಷಣೆ

A) iv)
B) i) ಮತ್ತು ii)
C) ii) ಮತ್ತು iii)
D) ii) ಮತ್ತು iv)

26. ಯಾವ ಸಾಂವಿಧಾನಿಕ ತಿದ್ದುಪಡಿಯು ಮೂಲಭೂತ ಹಕ್ಕುಗಳ ಪಟ್ಟಿಯಿಂದ ಸ್ವತ್ತಿನ ಹಕ್ಕನ್ನು ತೆಗೆದುಹಾಕಿತು ?

A) 52
B) 44
C) 39
D) 42

27. ಭಾರತೀಯ ಸಂಸತ್ತು ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ ಕಾಯಿದೆಯನ್ನು ಯಾವಾಗ ಅಂಗೀಕರಿಸಿತು ?

A) ಆಗಸ್ಟ್ 5, 2019ರಂದು
B) ಆಗಸ್ಟ್ 15, 2019ರಂದು
C) ಸೆಪ್ಟೆಂಬರ್ 5, 2019ರಂದು
D) ಆಗಸ್ಟ್ 5, 2018ರಂದು

28. ಕೇರಳದಲ್ಲಿ ಹದಿನಾಲ್ಕನೇ ಪಂಚವಾರ್ಷಿಕ ಯೋಜನೆ ಅವಧಿ

A) 2019 – 2024
B) 2022 – 2027
C) 2023 – 2028
D) 2024 – 2029

29. ಈ ಕೆಳಗಿನವುಗಳಲ್ಲಿ ಯಾವುದು ಕೇರಳ ಸಾಮಾಜಿಕ ಭದ್ರತಾ ಮಿಷನ್ ಯೋಜನೆಯಾಗಿಲ್ಲ ?

i) ತಾಲೋಲಂ

ii) ಸ್ನೇಹಪೂರ್ವಂ

iii) ಶ್ರುತಿ ತರಂಗಂ

iv) ಕುಟುಂಬಶ್ರೀ

A) i) ಮತ್ತು iv)
B) iii)
C) iii) ಮತ್ತು iv)
D) iv)

30. ಕೇರಳ ರಾಜ್ಯ ಹಣಕಾಸು ಆಯೋಗವನ್ನು ರಚಿಸಿದ ಸಂವಿಧಾನದ ಪರಿಚ್ಛೇದ

A) 243 (I) ಮತ್ತು 243 (Y)
B) 243 (K) ಮತ್ತು 243 (L)
C) 243 (A) ಮತ್ತು 243 (B)
D) 243 (M) ಮತ್ತು 243 (N)

31. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅಡಿಯಲ್ಲಿ ಏಪ್ರಿಲ್ 1, 2023ರಿಂದ ಕೇರಳದಲ್ಲಿ ಕಾರ್ಮಿಕರ ದೈನಂದಿನ ವೇತನದಲ್ಲಿ ಎಷ್ಟು ಹೆಚ್ಚಳವಾಗಿದೆ ?

A) 22 ರೂಪಾಯಿಗಳು
B) 32 ರೂಪಾಯಿಗಳು
C) 25 ರೂಪಾಯಿಗಳು
D) 35 ರೂಪಾಯಿಗಳು

32. ಕೆಳಗೆ ನೀಡಲಾಗಿರುವ ಸಂಕೇತಗಳಿಂದ ಕೋಷ್ಟಕ (I) (ಆರೋಗ್ಯ ಮತ್ತು ಕಲ್ಯಾಣ ಚಟುವಟಿಕೆಗಳು)ರೊಂದಿಗೆ ಹೊಂದಿಕೆಯಾಗುವ ಕೋಷ್ಟಕ (II)(ಫಲಾನುಭವಿಗಳು)ರ ಸರಿಯಾದ ಉತ್ತರವನ್ನು ಆರಿಸಿ.

| **ಕೋಷ್ಟಕ (I)** | **ಕೋಷ್ಟಕ (II)** |
|---|---|
| a) ಮಂದಹಾಸಂ ಯೋಜನೆ | 1) ನಿರ್ಗತಿಕ ವಿಧವೆಯರು |
| b) ಸಮನ್ವಯ ಕಾರ್ಯಕ್ರಮ | 2) ಅಪರಾಧದಿಂದ ಬದುಕುಳಿದವರು (ಬಲಿಪಶುಗಳು) |
| c) ಅಭಯಕಿರಣಂ ಯೋಜನೆ | 3) ವಿಶೇಷಚೇತನ ವ್ಯಕ್ತಿಗಳು |
| d) ನಿರಾಮಯ ಆರೋಗ್ಯ ವಿಮಾ ಸ್ಕೀಂ | 4) ಬಿಪಿಎಲ್ ವರ್ಗದ ಹಿರಿಯ ನಾಗರಿಕರು |
| | 5) ತೃತೀಯ ಲಿಂಗಿಗಳು |

A) 4513
B) 4512
C) 5412
D) 5423

33. ಇತ್ತೀಚೆಗೆ ವಿಶ್ವ ಆರೋಗ್ಯ ಸಂಸ್ಥೆಯು R21/Matrix-M ಲಸಿಕೆಯನ್ನು ಯಾವ ರೋಗದ ವಿರುದ್ಧ ಪೂರ್ವ ಅರ್ಹತೆಯೊಂದಿಗೆ ಅನುಮೋದಿಸಿದೆ ?

A) ದಡಾರ

B) ಮಂಕಿ ಪಾಕ್ಸ್

C) ಮೆನಿಂಜೈಟಿಸ್

D) ಮಲೇರಿಯಾ

34. ಕೆಳಗೆ ನೀಡಿರುವ ಹೇಳಿಕೆ ಮತ್ತು ಕಾರಣವನ್ನು ಎಚ್ಚರಿಕೆಯಿಂದ ಓದಿ ಮತ್ತು ಸರಿಯಾದ ಆಯ್ಕೆಯನ್ನು ಕಂಡುಕೊಳ್ಳಿ.

**ಹೇಳಿಕೆ :** ಹೃದಯ ಬಡಿತವನ್ನು ನಿಲ್ಲಿಸಿದಾಗ, ಅದನ್ನು ಹೃದಯ ಸ್ತಂಭನ ಎಂದು ಕರೆಯಲಾಗುತ್ತದೆ.

**ಕಾರಣ :** ಹೃದಯ ವೈಫಲ್ಯದಿಂದ ಹೃದಯಾಘಾತ ಸಂಭವಿಸುತ್ತದೆ.

A) ಹೇಳಿಕೆ ಮತ್ತು ಕಾರಣ ಎರಡೂ ನಿಜ ಮತ್ತು ಕಾರಣವು ಹೇಳಿಕೆಯ ಸರಿಯಾದ ವಿವರಣೆಯಾಗಿದೆ

B) ಹೇಳಿಕೆ ಮತ್ತು ಕಾರಣ ಎರಡೂ ಸರಿಯಾಗಿವೆ ಆದರೆ ಕಾರಣವು ಹೇಳಿಕೆಯ ಸರಿಯಾದ ವಿವರಣೆಯಲ್ಲ

C) ಹೇಳಿಕೆ ಸರಿಯಾಗಿದೆ ಕಾರಣ ತಪ್ಪು

D) ಹೇಳಿಕೆ ಮತ್ತು ಕಾರಣ ಎರಡೂ ತಪ್ಪಾಗಿವೆ

35. ಕೆಳಗಿನ ಹೇಳಿಕೆಗಳಲ್ಲಿ ಬೆರಿಬೆರಿ ಬಗ್ಗೆ ಸರಿಯಾದ ಆಯ್ಕೆಯನ್ನು ಆರಿಸಿ.

1. ವಿಟಮಿನ್ $B_2$ರ ಕೊರತೆಯಿಂದ ಉಂಟಾಗುವ ಒಂದು ರೋಗ
2. ಥಯಾಮಿನ್ ಕೊರತೆಯಿಂದ ಉಂಟಾಗುವ ರೋಗ
3. ಶಿಶುಗಳು ಮತ್ತು ಚಿಕ್ಕ ಮಕ್ಕಳಲ್ಲಿನ ಅಪೌಷ್ಟಿಕತೆಯಿಂದಾಗುವ ವೈಕಲ್ಯ
4. ಈ ರೋಗವು ಪ್ರಚಲಿತದಲ್ಲಿರುವ ದೇಶಗಳಲ್ಲಿ, ಪಾಲಿಶ್ ಮಾಡಿದ ಅಕ್ಕಿಯನ್ನು ಪ್ರಧಾನ ಆಹಾರವಾಗಿ ಸೇವಿಸಿರುವುದರಿಂದ ಕಂಡುಬರುತ್ತದೆ
5. ರೋಗಲಕ್ಷಣಗಳು – ನರಶೂಲೆ, ಪಾರ್ಶ್ವವಾಯು, ಸ್ನಾಯು ನೋವು, ಮಾನಸಿಕ ಸ್ವಾಸ್ಥ್ಯಹಾನಿ ಮತ್ತು ಹೃದಯ ಸ್ತಂಭನ

A) 2, 4, 5

B) 1, 2, 4

C) 1, 2, 5

D) 2, 3, 4

36. 2023ರಲ್ಲಿ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಸಮ್ಮೇಳನ (COP – 28) ಎಲ್ಲಿ ನಡೆಯಿತು ?

A) ಸೌದಿ ಅರೇಬಿಯಾ

B) ಕತಾರ್

C) ಯುಎಇ

D) ಒಮನ್

37. ಟಿ-ಲಿಂಫೋಸೈಟ್‌ನ ವ್ಯತ್ಯಾಸದಲ್ಲಿ ಯಾವ ಗ್ರಂಥಿಯು ಪ್ರಮುಖ ಪಾತ್ರ ವಹಿಸುತ್ತದೆ ?

A) ಥೈರಾಯ್ಡ್ ಗ್ರಂಥಿ

B) ಥೈಮಸ್ ಗ್ರಂಥಿ

C) ಅಡ್ರಿನಲ್ ಗ್ರಂಥಿ

D) ಗೊನಾಡ್‌ಗಳು

38. ಯಾವ ತಾಪಮಾನದಲ್ಲಿ ಸೆಂಟಿಗ್ರೇಡ್ ಸ್ಕೇಲ್ ಮತ್ತು ಫ್ಯಾರನ್‌ಹೀಟ್ ಸ್ಕೇಲ್ ಸಮಾನವಾಗಿರುತ್ತದೆ ?

A) $40^\circ$

B) $-40^\circ$

C) $37^\circ$

D) $-80^\circ$

39. ಫೋಟೋ ಎಲೆಕ್ಟ್ರಿಕ್ ಪರಿಣಾಮದಲ್ಲಿ ಪ್ರತಿ ಸೆಕೆಂಡಿಗೆ ಹೊರಸೂಸುವ ಫೋಟೋಎಲೆಕ್ಟ್ರಾನ್‌ಗಳ ಸಂಖ್ಯೆ

A) ಬೆಳಕಿನ ತರಂಗಾಂತರಕ್ಕೆ ಅನುಪಾತದಲ್ಲಿರುತ್ತದೆ

B) ಬೆಳಕಿನ ಆವರ್ತನಕ್ಕೆ ಅನುಪಾತದಲ್ಲಿರುತ್ತದೆ

C) ಬೆಳಕಿನ ತೀವ್ರತೆಗೆ ಅನುಪಾತದಲ್ಲಿರುತ್ತದೆ

D) ಬೆಳಕಿನ ವೇಗಕ್ಕೆ ಅನುಪಾತದಲ್ಲಿರುತ್ತದೆ

40. ವಿದ್ಯುತ್ಕಾಂತೀಯ ತರಂಗವು ಗಾಳಿಯಿಂದ ಗಾಜಿನ ಚಪ್ಪಡಿಗೆ ಪ್ರವೇಶಿಸಿದಾಗ ಈ ಕೆಳಗಿನವುಗಳಲ್ಲಿ ಯಾವುದು ಬದಲಾಗುವುದಿಲ್ಲ ?

A) ಆವರ್ತನ

B) ತರಂಗಾಂತರ

C) ವೇಗ

D) ವ್ಯಾಪ್ತಿ

41. ಚಂದ್ರಯಾನ 3ರ ರೋವರ್ ಈ ಕೆಳಗಿನ ಯಾವುದರ ಉಪಸ್ಥಿತಿಯನ್ನು ದೃಢಪಡಿಸಿತು ?

A) ಆಮ್ಲಜನಕ

B) ಹೈಡ್ರೋಜನ್

C) ಸಲ್ಫರ್

D) A) ಮತ್ತು C)

42. ಅಕ್ವೇರೆಜಿಯಾ ಯಾವುದರ ಮಿಶ್ರಣವಾಗಿದೆ ?

A) HCl, $H_2SO_4$

B) $HNO_3$, $H_2SO_4$

C) HCl, $HNO_3$

D) $HNO_3$, $CH_3COOH$

43. ವಾಶಿಂಗ್ ಸೋಡಾದ ರಾಸಾಯನಿಕ ಸೂತ್ರವು ________

A) $NaHCO_3$

B) $Na_2CO_3.10H_2O$

C) $Na_2SO_4$

D) NaOH

44. ಈ ಲೋಹವನ್ನು ಅದರ ಕಡಿಮೆ ಸಾಂದ್ರತೆಯಿಂದಾಗಿ ವಿಮಾನದ ಕವಚವನ್ನು ಮಾಡಲು ಬಳಸಲಾಗುತ್ತದೆ.

A) ಕಬ್ಬಿಣ

B) ಅಲ್ಯೂಮಿನಿಯಂ

C) ಬೆಳ್ಳಿ

D) ತಾಮ್ರ

45. ವಸ್ತುವಿನ ಪರಮಾಣು ಸಿದ್ಧಾಂತವನ್ನು ಮೊದಲು ಪ್ರಸ್ತಾಪಿಸಿದವರು ಯಾರು ?

A) ರುದರ್‌ಫೋರ್ಡ್

B) ಜೆ. ಜೆ. ಥಾಂಪ್ಸನ್

C) ನೀಲ್ಸ್ ಬೋರ್

D) ಜಾನ್ ಡಾಲ್ಟನ್

46. ನೋಬೆಲ್ ಶಾಂತಿ ಪ್ರಶಸ್ತಿಯನ್ನು ಗೆದ್ದ ಮೊದಲ ಆಫ್ರಿಕನ್ ಮಹಿಳೆ ಯಾರು ?

A) ಚಿಮಾಮಂಡ ಆಡಿಚೀ

B) ಮಿರಿಯಮ್ ಮಕೆಬಾ

C) ವಾಂಗೆರಿ ಮಾತೆಯಿ

D) ಎಲ್ಲೆನ್ ಜಾನ್ಸನ್ ಸಿರ್ಲೀಫ್

47. ‘ದಿ ಸಿಟಾಡೆಲ್’ ಕಾದಂಬರಿಯ ಕರ್ತೃ ಒಬ್ಬ ವೈದ್ಯರು. ಅವರು ಯಾರು ?

A) ಆಂಟನ್ ಚೆಕೊವ್

B) ವಿಲಿಯಂ ಕಾರ್ಲೋಸ್ ವಿಲಿಯಮ್ಸ್

C) ಆರ್ಥರ್ ಕಾನನ್ ಡಾಯ್ಲ್

D) ಎ. ಜೆ. ಕ್ರೋನಿನ್

48. ‘ಅಲಮಿಕ್ಕಲಿ’ ಎಂಬುದು ಕೇರಳದ ಯಾವ ಜಿಲ್ಲೆಯಲ್ಲಿ ಕಂಡುಬರುವ ಜಾನಪದ ಕಲಾ ಪ್ರಕಾರವಾಗಿದೆ ?

A) ಆಲಪ್ಪುಳ

B) ಪತ್ತನಂತಿಟ್ಟ

C) ಕಣ್ಣೂರು

D) ಕಾಸರಗೋಡು

49. “ಸೂಕ್ಷಿಚು ನೋಕ್ಕು
ಕವಿತಾಯಲ್ಲದೆಂತುಂದು
ಭೂಮಿಯಿಲ್”
ಎಲ್ಲದರಲ್ಲೂ ಕಾವ್ಯವನ್ನು ಕಾಣುವ ಈ ಮಹಾಕವಿ ಯಾರು ?

A) ಕುಮಾರನಾಸನ್

B) ಪಿ. ಕುಂಞಿರಾಮನ್ ನಾಯರ್

C) ವಲ್ಲತೋಳ್ ನಾರಾಯಣ ಮೆನನ್

D) ಉಲ್ಲೂರು ಎಸ್. ಪರಮೇಶ್ವರ ಅಯ್ಯರ್

50. 2023 ರ ಕಾದಂಬರಿ “ದಿ ಕವನೆಂಟ್ ಆಫ್ ವಾಟರ್” ಅನ್ನು ಬರೆದವರು ಯಾರು ?

A) ಅಬ್ರಹಾಂ ವರ್ಗೀಸ್

B) ಅನಿತಾ ದೇಸಾಯಿ

C) ಅಮಿತವ್ ಘೋಷ್

D) ಅರವಿಂದ ಅಡಿಗ

51. 0.01 ರ ಎಷ್ಟು ಶೇಕಡಾವಾರು 0.001 ಆಗಿದೆ ?

A) $\frac{1}{10}$

B) 10

C) 100

D) $\frac{1}{100}$

52. 15 __ 3 __ 4 __ 5 = 25 ಇದಕ್ಕೆ ಸೇರಿಸಲು ಸರಿಯಾದ ಚಿಹ್ನೆಗಳು ಯಾವುವು ?

A) ÷, +, ×

B) –, +, ×

C) –, ×, +

D) ÷, +, –

53. ಶಾಲೆಯ ಒಟ್ಟು ಮಕ್ಕಳಲ್ಲಿ 55% ಹುಡುಗಿಯರು ಮತ್ತು ಉಳಿದವರು ಹುಡುಗರು. ಶೇ. 90 ರಷ್ಟು ಬಾಲಕಿಯರು ಹಾಗೂ ಶೇ. 80 ರಷ್ಟು ಬಾಲಕರು ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಆ ಶಾಲೆಯಲ್ಲಿ 1600 ವಿದ್ಯಾರ್ಥಿಗಳಿದ್ದರೆ ಎಷ್ಟು ಶೇಕಡಾ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ ?

A) 14.5

B) 9.5

C) 85.5

D) 30

54. 156 : ? : : 182 : 342

A) 240

B) 380

C) 272

D) 306

55. ಅರುಣ್ ಮತ್ತು ಕಣ್ಣನ್ ಬೈಕ್‌ನಲ್ಲಿ ನಿರ್ದಿಷ್ಟ ಸ್ಥಳಕ್ಕೆ ತೆರಳುತ್ತಾರೆ. ಅರುಣ್ ಗಂಟೆಗೆ 60 ಕಿ. ಮೀ. ವೇಗದಲ್ಲಿ ಸಂಚರಿಸುತ್ತಿದ್ದಾರೆ ಮತ್ತು ಕಣ್ಣನ್ ಗಂಟೆಗೆ 40 ಕಿ. ಮೀ. ವೇಗದಲ್ಲಿ ಸಂಚರಿಸುತ್ತಿದ್ದಾರೆ. ಅರುಣ್ ಕಣ್ಣನ್‌ಗಿಂತ ಮೂರು ಗಂಟೆಗಳ ಮೊದಲು ತಮ್ಮ ಗಮ್ಯಸ್ಥಾನವನ್ನು ತಲುಪಿದ್ದರೆ, ಅವರು ಎಷ್ಟು ದೂರ ಪ್ರಯಾಣಿಸಿದರು ?

A) 306 ಕಿ. ಮೀ.

B) 300 ಕಿ. ಮೀ.

C) 360 ಕಿ. ಮೀ.

D) 600 ಕಿ. ಮೀ.

56. ನಿರ್ದಿಷ್ಟ ಸಂಕೇತ ಭಾಷೆಯಲ್ಲಿ 'TEACHER' ಎಂಬುದು WCDAKCU ಆಗಿದ್ದರೆ, 'STUDENT' ಪದದ ಸಂಕೇತ ಯಾವುದು ?

A) VRXGCOW

B) VRXBHLW

C) VWZACIW

D) VWRBCLW

57. $\frac{(3)^{0.25} \times (7)^{0.25} \times (16)^{0.49}}{(21)^{0.25} \times (16)^{0.24}} = ?$

A) 2 B) 1 C) 4 D) 0

58. 45 ಸೆಂ. ಮೀ. ಬದಿಯನ್ನು ಹೊಂದಿರುವ ಚೌಕಾಕಾರದ ಲೋಹದ ತಟ್ಟೆಯಿಂದ 9 ಸೆಂ. ಮೀ. ಬದಿಯ ಎಷ್ಟು ಚಿಕ್ಕ ಚೌಕಾಕಾರದ ಫಲಕಗಳನ್ನು ಮಾಡಬಹುದು ?

A) 5 B) 36

C) 54 D) 25

59. ಸಮಯ 12.20 ಆಗಿರುವಾಗ ಗಡಿಯಾರದ ಮುಳ್ಳುಗಳ ನಡುವಿನ ಕೋನ ಎಷ್ಟು ?

A) 150°

B) 120°

C) 130°

D) 110°

60. ಒಬ್ಬ ಮನುಷ್ಯನು ಮನೆಯಿಂದ ಪೂರ್ವದ ಕಡೆಗೆ ತನ್ನ ಪ್ರಯಾಣವನ್ನು ಪ್ರಾರಂಭಿಸಿದನು. ಅವನು ಬಲಕ್ಕೆ ತಿರುಗಿ ಮತ್ತು ನಂತರ ಮತ್ತೆ ಬಲಕ್ಕೆ ತಿರುಗಿ ಮತ್ತು ತನ್ನ ಪ್ರಯಾಣವನ್ನು ಮುಂದುವರೆಸುತ್ತಾನೆ, ಅವನು ಈಗ ಯಾವ ದಿಕ್ಕಿನಲ್ಲಿ ಪ್ರಯಾಣಿಸುತ್ತಿದ್ದಾನೆ ?

A) ದಕ್ಷಿಣಕ್ಕೆ

B) ಉತ್ತರಕ್ಕೆ

C) ಪಶ್ಚಿಮಕ್ಕೆ

D) ಪೂರ್ವಕ್ಕೆ

61. Let's go for a movie, ______________

A) don't we ?

B) shall we ?

C) do we ?

D) shalln't we ?

62. I went to ___________ National Park yesterday.

A) a

B) an

C) the

D) none of the above

Choose the correct idiom for the word underlined.

63. Siddharth is a straight arrow.

A) an honest and trustworthy person

B) an evil person

C) an anxious person

D) an outdated person

64. If you work hard, ___________

A) you would succeed

B) you will succeed

C) you would've succeeded

D) you will have succeeded

65. 'Faux pas' means ____________

A) an embarrassing or tactless act or remark in a social situation.

B) a particular way or method of doing something.

C) a feeling of having already experienced the present situation.

D) none of the above

66. Choose the correct spelling.

A) bourgoeis
B) bourgeois
C) buorgeois
D) bourgeosis

67. You ___________ obey the rules and regulations.

A) may
B) can
C) need to
D) must

68. Neither Sam nor Ram ____________ present.

A) is
B) am
C) was
D) none of these

69. Rahul said, "I live in Chennai". Change into indirect speech.

A) Rahul said that he lived in Chennai.
B) Rahul said he lives in Chennai.
C) Rahul said that he is living in Chennai.
D) Rahul told he lives in Chennai.

70. Synonym for the word preposterous.

A) Contrary to reason or commonsense, utterly absurd
B) a witty statement
C) a sensible comment
D) none of the above

71. ಕೆಳಗಿನವುಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.

A) ಪೃಭೇದ

B) ಪ್ರಭೇದ

C) ಪ್ರಬೇಧ

D) ಪೃಬೇಧ

72. 'ಸನ್ಮಾನ' ಈ ಪದದ ವಿಂಗಡಣೆ

A) ಸನ್ + ಮಾನ

B) ಸತ್ + ಮಾನ

C) ಸಮ್ + ಮಾನ

D) ಸದ್ + ಮಾನ

73. 'ಧರಿತ್ರಿ' ಈ ಪದದ ಪರ್ಯಾಯ ಪದ

A) ಚಂದ್ರ

B) ಭಾನು

C) ಕ್ಷಿತಿ

D) ಇಕ್ಷು

74. Unity is strength – ಇದಕ್ಕೆ ಸಮಾನವಾದ ಕನ್ನಡ ಗಾದೆ

A) ಆರೋಗ್ಯವೆ ಭಾಗ್ಯ

B) ಒಗ್ಗಟ್ಟಿನಲ್ಲಿ ಬಲವಿದೆ

C) ಮನಸ್ಸಿದ್ದರೆ ಮಾರ್ಗ

D) ಹೊಳೆಯುವುದೆಲ್ಲ ಚಿನ್ನವಲ್ಲ

75. 'ವಿಯೋಗ' ಈ ಪದದ ವಿರೋಧಾರ್ಥ ಪದ

A) ಯಾಗ

B) ಅಯೋಗ

C) ಸಂಯೋಗ

D) ನಿಯೋಗ

76. ಒಂಟಿ ಕಾಲಲ್ಲಿ ನಿಲ್ಲು – ಈ ಭಾಷಾ ಪ್ರಯೋಗದ ಅರ್ಥ

A) ತಿರಸ್ಕರಿಸು

B) ಕುತೂಹಲ

C) ಬಲಹೀನತೆ

D) ನೊಂದುಕೊಳ್ಳು

77. 'ಸದೃಶ' ಈ ಪದದ ಭಾವನಾಮ

A) ಅದೃಶ್ಯ

B) ಅನ್ಯಾದೃಶ

C) ಸಾದೃಶ್ಯ

D) ದೃಶ್ಯ

78. ಕೆಳಗಿನವುಗಳಲ್ಲಿ ಬಹುವಚನ ಪದ

A) ಮಗ

B) ಮಕ್ಕಳು

C) ಮೊಮ್ಮಗ

D) ಮಗಳು

79. ಹಿಂದೆ ರಾಜಕುಮಾರಿಯರು ತಮ್ಮ ಮುಖ ಮುಚ್ಚಿಕೊಳ್ಳಲು ಬಳಸುತ್ತಿದ್ದ ಬಟ್ಟೆ

A) ಅಂತರ್ಪಟ

B) ಅವಗುಂಟನ

C) ಯವನಿಕೆ

D) ಶಲ್ಯ

80. ಇಮ್ಮಡಿ ಈ ಪದದ ವಿಗ್ರಹ ವಾಕ್ಯ

A) ಇರಿದು ಮಡಿ

B) ಇತ್ತು ಮಡಿ

C) ಎರಡು ಮಡಿ

D) ಎರಡು ಪಡಿ

81. ಜೀವಾವಧಿ ಖೈದಿಗಳನ್ನು ಹೊಂದಿರುವ ಜೈಲು

A) ಜಿಲ್ಲಾ ಕಾರಾಗೃಹ

B) ಬೋರ್ಸ್ಟಲ್ ಸ್ಕೂಲ್

C) ವಿಶೇಷ ಉಪ ಕಾರಾಗೃಹ

D) ಕೇಂದ್ರ ಕಾರಾಗೃಹ

82. ಕೇರಳ ರಾಜ್ಯ ರಚನೆಯ ಅನಂತರ ನಿರ್ಮಿಸಲಾದ ಮೊದಲ ಕೇಂದ್ರ ಕಾರಾಗೃಹ

A) ಕಣ್ಣೂರು

B) ತಿರುವನಂತಪುರಂ

C) ತವನೂರ್

D) ತ್ರಿಶೂರ್

83. ಯಾವ ಹುದ್ದೆಯು ಕೇಂದ್ರ ಕಾರಾಗೃಹದ ಜಂಟಿ ಸೂಪರಿಂಟೆಂಡೆಂಟ್‌ಗೆ ಸಮಾನವಾಗಿದೆ ?

A) ವಿಶೇಷ ಉಪ ಕಾರಾಗೃಹ ಸೂಪರಿಂಟೆಂಡೆಂಟ್

B) ಮಹಿಳಾ ಜೈಲು ಸೂಪರಿಂಟೆಂಡೆಂಟ್

C) ಬೋರ್ಸ್ಟಲ್ ಸ್ಕೂಲ್ ಸೂಪರಿಂಟೆಂಡೆಂಟ್

D) ಸಿಕ್ಕ ಲೆಕ್ಚರಲ್

84. ನೆಟ್ಟು ಕಾಲ್ತೇರಿ ಮುಕ್ತ ಜೈಲು ಸ್ಥಾಪನೆಯಾದ ವರ್ಷ

A) 1965

B) 1962

C) 1974

D) 1986

85. ಕೇರಳ ರಾಜ್ಯದಲ್ಲಿ ಮಹಿಳೆಯರಿಗಾಗಿ ಇರುವ ಏಕೈಕ ಮುಕ್ತ ಜೈಲು ಯಾವ ಜಿಲ್ಲೆಯಲ್ಲಿದೆ ?

A) ಕಾಸರಗೋಡು

B) ತ್ರಿಶೂರ್

C) ಎರ್ನಾಕುಲಂ

D) ತಿರುವನಂತಪುರಂ

86. ಕೇರಳ ಜೈಲು ಇಲಾಖೆಯಲ್ಲಿ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯ ಉಸ್ತುವಾರಿ ಅಧಿಕಾರಿ ಯಾರು ?

A) ಡಿ.ಜಿ.ಪಿ.

B) ಡಿ.ಜಿ.ಪಿ. ಯವರ ಪಿ.ಎ.

C) ಡಿ.ಐ.ಜಿ. (ಜೈಲ್ ಪ್ರಧಾನ ಕಛೇರಿ)

D) ಹಿರಿಯ ಆಡಳಿತಾಧಿಕಾರಿ

87. ಈ ಕೆಳಗಿನವುಗಳಲ್ಲಿ ಯಾವುದನ್ನು ಮಾಹಿತಿ ಹಕ್ಕು ಕಾಯಿದೆ, 2005 ರ ಶೆಡ್ಯೂಲ್ II ರಲ್ಲಿ ಸೇರಿಸಲಾಗಿಲ್ಲ ?

A) ಸಿ.ಐ.ಎಸ್.ಎಫ್.

B) ಅಸ್ಸಾಂ ರೈಫಲ್ಸ್

C) ಸಿ.ಆರ್.ಪಿ.ಎಫ್.

D) ವಿಜಿಲೆನ್ಸ್

88. ಆರ್‌ಟಿಐ ಕಾಯಿದೆಯ ಅಡಿಯಲ್ಲಿ ಸಾಮಾನ್ಯ ಮಾದರಿ ಆರ್‌ಟಿಐ ಅರ್ಜಿಗೆ ಪ್ರತ್ಯುತ್ತರಿಸಲು ಗರಿಷ್ಠ ಸಮಯ ಎಷ್ಟು ?

A) 2 ತಿಂಗಳುಗಳು

B) 14 ದಿನಗಳು

C) 30 ದಿನಗಳು

D) 6 ತಿಂಗಳುಗಳು

89. ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಮಾಹಿತಿ ಬಹಿರಂಗಪಡಿಸುವಿಕೆಯಿಂದ ವಿನಾಯಿತಿ ನೀಡಲಾಗಿರುವ

A) ಮಾಹಿತಿಯನ್ನು ಸಾರ್ವಜನಿಕಗೊಳಿಸಬಾರದು ಎಂದು ನ್ಯಾಯಾಲಯದ ಆದೇಶ

B) ಸರ್ಕಾರಿ ಸಂಸ್ಥೆಯ ಉದ್ಯೋಗಿಗಳ ಮಾಹಿತಿ

C) ಸಾರ್ವಜನಿಕ ಸಂಸ್ಥೆಯ ಜವಾಬ್ದಾರಿಗಳು ಮತ್ತು ಕರ್ತವ್ಯಗಳು ಅದಕ್ಕೆ ಸಂಬಂಧಿಸಿದ ವಿವರಗಳು

D) ಉದ್ಯೋಗಿಗಳ ಸಂಭಾವನೆಯ ವಿವರಗಳು

90. ಯಾರು ಮುಖ್ಯ ಮಾಹಿತಿ ಆಯುಕ್ತರು ಮತ್ತು ಮಾಹಿತಿ ಆಯುಕ್ತರ ಆಯ್ಕೆಯ ಶಿಫಾರಸುಗಳನ್ನು ಸಿದ್ಧಪಡಿಸುವ ಸಮಿತಿಯ ಭಾಗವಾಗಿಲ್ಲ ?

A) ಉಪ ರಾಷ್ಟ್ರಪತಿ

B) ಪ್ರಧಾನಮಂತ್ರಿ

C) ಪ್ರಧಾನಮಂತ್ರಿಯಿಂದ ನಾಮನಿರ್ದೇಶನಗೊಂಡ ಕ್ಯಾಬಿನೆಟ್ ಮಂತ್ರಿ

D) ಲೋಕಸಭೆಯ ವಿರೋಧ ಪಕ್ಷದ ನಾಯಕ

91. ರಾಷ್ಟ್ರೀಯ ಮಾನವ ಹಕ್ಕುಗಳ ಕಾಯಿದೆ, 1993 ರ ಪ್ರಕಾರ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರ ಹುದ್ದೆಯನ್ನು ಯಾರು ಹೊಂದಿದ್ದಾರೆ ?

A) ಸುಪ್ರೀಂ ಕೋರ್ಟ್‌ನ ಮಾಜಿ ಮುಖ್ಯ ನ್ಯಾಯಾಧೀಶರು

B) ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರು

C) ಯಾವುದೇ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರು

D) ಹೈಕೋರ್ಟ್‌ನ ನ್ಯಾಯಾಧೀಶರು

92. ರಾಷ್ಟ್ರೀಯ ಮಾನವ ಹಕ್ಕುಗಳ ಕಾಯಿದೆ, 1993 ರ ಯಾವ ಸೆಕ್ಷನ್ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವನ್ನು ವ್ಯಾಖ್ಯಾನಿಸುತ್ತದೆ ?

A) ಸೆಕ್ಷನ್ 2(1) a

B) ಸೆಕ್ಷನ್ 2(1) c

C) ಸೆಕ್ಷನ್ 2(1) d

D) ಸೆಕ್ಷನ್ 2(1) f

93. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ವಾರ್ಷಿಕ ವಿಶೇಷ ವರದಿಗಳನ್ನು ಯಾರಿಗೆ ಸಲ್ಲಿಸುತ್ತದೆ ?

A) ರಾಷ್ಟ್ರಪತಿ

B) ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರು

C) ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ

D) ಪ್ರಧಾನಮಂತ್ರಿ

94. ಯಾವ ಅಧಿಕೃತ ದಾಖಲೆಯನ್ನು ವಿಶ್ವದ ಹೆಚ್ಚಿನ ಭಾಷೆಗಳಿಗೆ ಅನುವಾದಿಸಲಾಗಿದೆ ?

A) ಮ್ಯಾಗ್ನಾ ಕಾರ್ಟಾ

B) ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಹ್ಯೂಮನ್ ರೈಟ್ಸ್

C) ಭಾರತೀಯ ಸಂವಿಧಾನ

D) ಯು. ಎನ್. ಚಾರ್ಟರ್

95. ಕೇರಳ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ಸದಸ್ಯರಾಗಿ ನೇಮಕಗೊಂಡ ವ್ಯಕ್ತಿಯ ಅಧಿಕಾರದ ಅವಧಿ

A) ಮೂರು ವರ್ಷಗಳ ಅಧಿಕಾರಾವಧಿ, ಮರು ನೇಮಕಕ್ಕೆ ಅರ್ಹರಾಗಿದ್ದರೆ

B) ಮೂರು ವರ್ಷಗಳ ಅಧಿಕಾರಾವಧಿ, ಮರು ನೇಮಕವಿಲ್ಲ

C) ಐದು ವರ್ಷಗಳ ಅಧಿಕಾರಾವಧಿ, ಮರು ನೇಮಕಕ್ಕೆ ಅರ್ಹರಾಗಿದ್ದರೆ

D) ಐದು ವರ್ಷಗಳ ಅಧಿಕಾರಾವಧಿ, ಮರು ನೇಮಕವಿಲ್ಲ

96. ಮನೋವಿಶ್ಲೇಷಣಾತ್ಮಕ ಸಿದ್ಧಾಂತದ ಸ್ಥಾಪಕರು ಯಾರು ?

i) ಸಿಗ್ಮಂಡ್ ಫ್ರಾಯ್ಡ್

ii) ವಿಲಿಯಂ ವುಂಡ್

iii) ಕಾರ್ಲ್ ಯೂಂಗ್

iv) ಕಾರ್ಲ್ ರೋಜರ್ಸ್

A) iv)
B) i)
C) iii)
D) ii)

97. ಕೆಳಗಿನವುಗಳಲ್ಲಿ ಮಾನಸಿಕ ಒತ್ತಡದ ಆಂತರಿಕ ಲಕ್ಷಣ ಯಾವುದು ?

i) ಮಾನಸಿಕ ಪರಿಹಾರ

ii) ಶ್ರದ್ಧೆ ಕೇಂದ್ರೀಕರಿಸುವಲ್ಲಿ ತೊಂದರೆ

iii) ಉತ್ತಮತಮ ಏಕಾಗ್ರತೆ

iv) ಇವುಗಳಲ್ಲಿ ಯಾವುದೂ ಅಲ್ಲ

A) iv)
B) iii)
C) i)
D) ii)

98. ಕೆಳಗಿನವುಗಳಲ್ಲಿ ಆತಂಕದ ದೈಹಿಕ ಲಕ್ಷಣ ಯಾವುದು ?

i) ಕಡಿಮೆ ರಕ್ತದೊತ್ತಡ

ii) ಅಸ್ಪಷ್ಟ ಮಾತು

iii) ನಿಧಾನ ಉಸಿರಾಟ

iv) ಹೆಚ್ಚಿದ ಹೃದಯ ಬಡಿತ

A) iv) B) iii)

C) ii) D) i)

99. ಬಹುಮುಖ ಬುದ್ಧಿವಂತಿಕೆಗಳ ಸಿದ್ಧಾಂತವನ್ನು ಆವಿಷ್ಕಾರ ಮಾಡಿದವರು ಯಾರು ?

i) ಆಲ್ಫ್ರೆಡ್ ಬಿನೆಟ್

ii) ಲೆವಿಸ್ ಟರ್ಮನ್

iii) ಹೊವಾರ್ಡ್ ಗಾರ್ಡನರ್

iv) ಡೇನಿಯಲ್ ಗೋಲ್ಮನ್

A) iv) B) i)

C) iii) D) ii)

100. ಮಾಸ್ಲೋರವರ ಅಗತ್ಯತೆಗಳ ಸಿದ್ಧಾಂತದ ಶ್ರೇಣಿಯ ಪ್ರಕಾರ, ಅತ್ಯುನ್ನತ ಮಟ್ಟದ ಅಗತ್ಯವೆಂದರೆ

i) ದೈಹಿಕ ಅಗತ್ಯ

ii) ಭದ್ರತೆ ಅಗತ್ಯ

iii) ಸ್ವಯಂ-ಸಾಕ್ಷಾತ್ಕಾರ ಅಗತ್ಯ

iv) ಸ್ನೇಹಕ್ಕೆ ಸಂಬಂಧಿಸಿದ ಅಗತ್ಯತೆಗಳು

A) i) B) ii)

C) iv) D) iii)

## Space for Rough Work